**<u>ದಿನಾಂಕಃ 03.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ವಾದಿ ಪರ ಶ್ರೀ. ಸಿ ಕೆ ಎಂ ವಕೀಲರಿಂದಃ-</u>**

1. ನಾನು ಹಾಜರು ಮಾಡಿರುವ ವಿಜಯ ಬ್ಯಾಂಕ್ ನ ಕರೆಂಟ್ ಖಾತೆಯ ಪಾಸ್ ಬುಕ್ ಹಾಜರುಪಡಿಸಿದ್ದು ಅಕೌಂಟ್ ನಂ.849 ಎಂದು ಇದೆ ಎಂದರೆ ಸರಿ. ನಿಪಿ-1 ಚೆಕ್ ನಲ್ಲಿರುವ ಅಕೌಂಟ್ ನಂಬರ್ ನಿಡಿ-1ರಲ್ಲಿರುವ ಅಕೌಂಟ್ ನಂಬರ್ ಎರಡು ಒಂದೇ ಎಂದರೆ ಸರಿ. ನಿಪಿ-1 ಚೆಕ್ ನನ್ನ ಗಂಡ ಶಿವಕುಮಾರ್ ರವರ ಖಾತೆಗೆ ಸೇರಿದ ಚೆಕ್ಕು ಎಂದರೆ ಸರಿ. **ತಮಗೆ ತಮ್ಮ ಗಂಡ ಶಿವಕುಮಾರ್ ರವರು ಮಾಡಿದ ಎಲ್ಲಾ ವ್ಯವಹಾರಗಳು ಗೊತ್ತಾ ಎಂದರೆ ಗೊತ್ತಿಲ್ಲ ಎನ್ನುತ್ತಾರೆ**. ತಮ್ಮ ಚೀಟಿ ವ್ಯವಹಾರ ನಡೆಸುತ್ತಿದ್ದು ಚೀಟಿ ಹಾಕಿದ್ದ ಎಲ್ಲಾ ಸದಸ್ಯರಿಗೂ ಹಣ ಕೊಟ್ಟಿರುತ್ತೇನೆ ಎಂದು ಹೇಳಿದ್ದು ಎಷ್ಟು ಜನ ಸದಸ್ಯರು ಇದ್ದರು ಎಂದರೆ ಸಾಕ್ಷಿ 5-6 ಜನ ಎನ್ನುತ್ತಾರೆ. 5 ರಿಂದ 6 ಜನರ ಹೆಸರುಗಳನ್ನು ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಒಬ್ಬೊಬ್ಬರಿಗೆ ಎಷ್ಟು ಮೊತ್ತದ ಹಣವನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ 50 ಸಾವಿರಿ, 1 ಲಕ್ಷ ಕೊಟ್ಟಿರುತ್ತೇನೆ ಎನ್ನುತ್ತಾರೆ. ತಮ್ಮ ಗಂಡ ತೀರಿಕೊಂಡ ನಂತರ ತಮ್ಮ ಕುಟುಂಬಕ್ಕೆ ಸೇರಿದ ಯಾವುದಾದರೂ ಆಸ್ತಿಯನ್ನು ಮಾರಾಟ ಮಾಡಿದ್ದೀರಾ ಎಂದರೆ ಮಾರಾಟ ಮಾಡಿದ್ದೇನೆ ಎನ್ನುತ್ತಾರೆ.

2. ಎಷ್ಟು ಆಸ್ತಿಯನ್ನು ಮಾರಾಟ ಮಾಡಿದ್ದೀರಾ ಎಂದರೆ ಒಂದು ಸೈಟು 2 ರಿಂದ 3 ಎಕರೆ ಜಮೀನು ಎನ್ನುತ್ತಾರೆ. ಸೈಟನ್ನು ಯಾರಿಗೆ ಮಾರಾಟ ಮಾಡಿರುತ್ತೀರಿ ಎಂದರೆ ಸಾಕ್ಷಿ ತನ್ನ ನಾದಿನಿ ಮಗ ಸುಜಯ್ ಕುಮಾರ್ ಗೆ ಎನ್ನುತ್ತಾರೆ. ವಿಜಯ ಬ್ಯಾಂಕ್ ನಲ್ಲಿ ಮಾಡಿದ್ದ ಸಾಲವನ್ನು ತೀರಿಸಿದ್ದೀರಾ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ತನ್ನ ಗಂಡ ಬದುಕಿದ್ದಾಗ ತೀರಿಸಿರುತ್ತಾರೆ ಎನ್ನುತಾರೆ. ಮನೆ ನಂ.2227, 2227/12ಎ ಮನೆ ಆಸ್ತಿಯನ್ನು ವಿಸ್ತೀರ್ಣ 66 * 40 ಮನೆಯನ್ನು ಅಡಮಾನ ಮಾಡಿ 2007-08ರಲ್ಲಿ ರೂ.6

ಲಕ್ಷ ಸಾಲವನ್ನು ತನ್ನ ಗಂಡ ಪಡೆದಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿದು ಮನೆ ಕಟ್ಟುವ ಸಂದರ್ಭದಲ್ಲಿ ಸಾಲವನ್ನು ಪಡೆದಿದ್ದರು ಎನ್ನುತ್ತಾರೆ. ಚನ್ನಪಟ್ಟಣ ಶಾಖೆ ವಿಜಯ ಬ್ಯಾಂಕ್ ಇವರಿಗೆ ರೂ.6 ಲಕ್ಷ ಸಾಲದ ಹಣದ ಭದ್ರತೆಗಾಗಿ ಉಪನೊಂದಾಣಾಧಿಕಾರಿ ಚನ್ನಪಟ್ಟಣ ಕಛೇರಿಯಲ್ಲಿ  ನೊಂದಾಯಿತ ಪತ್ರ ಮಾಡಿಕೊಟ್ಟು ಸಾಲ ಪಡೆದಿದ್ದರು ಎಂದರೆ ಸರಿಯಲ್ಲ.  ನನ್ನ ಗಂಡ ಕನ್ನಡ ಮತ್ತು ಇಂಗ್ಲೀಷ್ ಎರಡು ಭಾಷೆಯಲ್ಲಿ ಸಹಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಬ್ಯಾಂಕ್ ವ್ಯವಹಾರಕ್ಕೆ ಇಂಗ್ಲೀಷ್ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಲದ ಹಣ ವಾಪಸ್ಸು ಮಾಡುವ ಹೊಣೆಗಾರಿಕೆ ತಪ್ಪಿ ಸಿಕೊಳ್ಳಲು ತಮ್ಮ ಗಂಡ ಇಂಗ್ಲೀಷ್ ಭಾಷೆಯಲ್ಲಿ ಸಹಿ ಮಾಡಿದ್ದರು ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ತಮ್ಮ ಗಂಡ ತೀರಿಕೊಂಡ ನಂತರ ಅವರು ವಿಜಯ ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದನ್ನು ಕ್ಯಾನ್ಸಲ್ ಮಾಡಿಸಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ನನ್ನ ಗಂಡನ ವಿಜಯ ಬ್ಯಾಂಕ್ ನ ಖಾತೆ ಕರೆಂಟ್ ಖಾತೆ ಇದ್ದ ಕಾರಣ ಪ್ರತಿ ನಿತ್ಯ ವ್ಯವಹರಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

4. ಪಿರ್ಯಾದುದಾರರು ತಮಗೆ ನೋಟೀಸ್ ಕಳುಹಿಸಿದ್ದಕ್ಕೆ ತಾವು ಪ್ರತ್ಯುತ್ತರ ನೋಟೀಸ್ ಕೊಟ್ಟಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ಪಿರ್ಯಾದುದಾರರಿಗೆ 3 ಲಕ್ಷ ಹಣವನ್ನು ನನ್ನ ಗಂಡ ಕೊಡಬೇಕಾಗಿರುವುದು ಗೊತ್ತಿದ್ದರಿಂದ ನಾನು ಪ್ರತ್ಯುತ್ತರ ನೋಟೀಸ್ ಕೊಟ್ಟಿಲ್ಲ ಎಂದರೆ ಸರಿಯಲ್ಲ.  ನನ್ನ ಗಂಡ ಎಷ್ಟು ಬ್ಯಾಂಕ್ ಗಳಲ್ಲಿ ಖಾತೆ ಹೊಂದಿದ್ದರು ಎಂದು ನನಗೆ ಗೊತ್ತಿಲ್ಲ. 01.01.2000 ರಿಂದ  25.08.2022 ರವರೆಗೆ ನನ್ನ ಗಂಡನಿಗೆ ಸೇರಿದ ವಿಜಯ ಬ್ಯಾಂಕ್ ಖಾತೆ ಪ್ರಸ್ತುತ ಬ್ಯಾಂಕ್ ಆಫ್ ಬರೋಡ ಚಾಲ್ತಿಯಲ್ಲಿ ಇತ್ತು ಎಂದರೆ ಸರಿಯಲ್ಲ. ನಿಪಿ-1 ಚೆಕ್ ನನ್ನ ಗಂಡನಿಗೆ ಸೇರಿದ್ದು, ಸದರಿ ಚೆಕ್ ನಲ್ಲಿ ಇರುವ

ಸಹಿ ನನ್ನ ಗಂಡನದೆ ಎಂದು ಗೊತ್ತಿದ್ದರು ಹೊಣೆಗಾರಿಕೆಯಿಂದ ತಪ್ಪಿ ಸಿಕೊಳ್ಳಲು ಚೆಕ್ ನನ್ನ ಗಂಡನದು ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ